O.S .No. 63/2012
PW-1

ದಿನಾಂಕ: 12-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು 1 ರಿಂದ 5 ನೇ ಪ್ರತಿವಾದಿ ಪರ ಶ್ರೀ ಡಿ.ಎ. ವಕೀಲರಿಂದಃ**

ನ್ಯಾಯಾಲಯದ ಸಲ್ಲಿಸಿದ ದಾಖಲಾತಿಗಳನ್ನು ತಾಲ್ಲೂಕು ಕಚೇರಿಯಿಂದ ಪಡೆದಿರುತ್ತೇನೆ. ನ್ಯಾಯಾಲಯದ ಸಲ್ಲಿಸಿದ ದಾಖಲಾತಿಗಳನ್ನು 2012 ರಲ್ಲಿ ಪಡೆದಿರುತ್ತೇನೆ. ಹಿಂದಿನ ಮುಖ್ಯ ವಿಚಾರಣಾ ಅವಧಿಯಲ್ಲಿ ನ್ಯಾಯಾಲಯಕ್ಕೆ ಏನೆನೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ನಕಾಶೆ, ಪಹಣಿ, ತಹಶೀಲ್ದಾರವರು ರಸ್ತೆ ಇರುವ ಬಗ್ಗೆ ಮಹಜರ್ ಮಾಡಿದ ಬಗ್ಗೆ ಮಹಜರ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಕಾಶೆಯನ್ನು ಕಳೆದ ತಿಂಗಳಿನಲ್ಲಿ ಅರ್ಜಿ ಸಲ್ಲಿಸಿ ಪಡೆದಿರುತ್ತೇನೆ. ಸಾಕ್ಷಿಗೆ ತನ್ನ ಪರ ಗುರುತಿಸದ ದಾಖಲಾತಿಗಳನ್ನು ಕೊಟ್ಟು, ಅದರಲ್ಲಿ ನಕಾಶೆಯನ್ನು ಗುರುತಿಸುವಂತೆ ಕೇಳಿದ್ದು, ಸಾಕ್ಷಿ ನಿಪಿ-12 ಎಂದು ಗುರುತಿಸಿರುತ್ತಾರೆ. ನಿಪಿ-12 ನ್ನು ಈ ದಾವೆಗೊಸ್ಕರ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ.

ನಿಪಿ-21 ರಂತೆ ತಿಳುವಳಿಕೆ ಪತ್ರವನ್ನು ನನ್ನ ಜಮೀನಿಗೆ ಹೋಗಲು ರಸ್ತೆ ಬಿಡಿಸಿಕೊಡುವಂತೆ ತಹಶೀಲ್ದಾರವರಿಗೆ ನೀಡಿರುತ್ತೇನೆ. ನಿಪಿ-21 ರಂತೆ ತಿಳುವಳಿಕೆ ಪತ್ರವನ್ನು ದಾವೆ ಹೂಡಿದ 10 ವರ್ಷಗಳ ನಂತರ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ನ್ಯಾಯಾಲಯಕ್ಕೆ ಈಗ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ನಿಪಿ-21 ರಿಂದ 23 ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿ ನ್ಯಾಯಾಲಯ ಕೇಳಿದ್ದರಿಂದ ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ನಿಮ್ಮ ವಿಚಾರಣೆ ಸಂದರ್ಭದಲ್ಲಿ ದಾಖಲಾತಿಗಳನ್ನು ಕೊಡದೇ, ದಾವೆಯ ಅಂತಿಮ ಭಾಗದಲ್ಲಿ ನಿಪಿ-21 ರಿಂದ 23 ನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

**ಪಾಟೀ ಸವಾಲು 6 ರಿಂದ 9 ನೇ ಪ್ರತಿವಾದಿ ಪರ ಎ.ಜಿ.ಪಿ ರವರಿಂದ**

ಕೂಗಿಸಲಾಯಿತು ಯಾರು ಬರದೇ ಇದ್ದುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ**.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.